## ನಿಮ್ಮೊಡನೆ

# ಆಹಾರ ಸುರಕ್ಷೆಯತ್ತ ಗಮನ ಹರಿಸಿ

> ಭಾರತೀಯ ಆಹಾರ ಸುರಕ್ಷೆ ಗುಣಮಟ್ಟ ಪ್ರಾಧಿಕಾರದ ಕಾರ್ಯನಿರ್ವಹಣೆಯ ಬಗ್ಗೆ ಸಂಸದೀಯ ಸಮಿತಿ ಹಲವಾರು ಪ್ರಶ್ನೆಗಳನ್ನು ಎತ್ತಿದೆ. ಎಫ್‌ಎಸ್‌ಎಸ್‌ಎಐ ತನ್ನ ಕೆಲಸವನ್ನು ಸರಿಯಾಗಿ ಮಾಡುತ್ತಿಲ್ಲ. ಹಾಗೆ ಅದು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿಲ್ಲ ಎನ್ನುವುದನ್ನು ಸರಕಾರವೂ ಗಂಭೀರವಾಗಿ ಪರಿಗಣಿಸಿದಂತಿಲ್ಲ.


ಆಹಾರದ ಕಲಬೆರಕೆ ಮತ್ತು ನಕಲು ನಮ್ಮ ಸಮಾಜವನ್ನು ಕಾಡುತ್ತಿರುವ ಬಹುದೊಡ್ಡ ಪಿಡುಗು. ಈ ಪಿಡುಗನ್ನು ನಿಯಂತ್ರಿಸುವ ನಿಟ್ಟಿನಲ್ಲಿ ನಮ್ಮಲ್ಲಿ ಸಾಕಷ್ಟು ಕಾನೂನುಗಳ ರಚನೆಯಾಗಿದೆ. ಆದರೆ ಆ ಕಾನೂನುಗಳು ಕಟ್ಟುನಿಟ್ಟಾಗಿ ಜಾರಿಗೊಳ್ಳುತ್ತಿಲ್ಲ ಎನ್ನುವುದೇ ಸಮಸ್ಯೆ. ದೇಶದ ಆಹಾರ ಸುರಕ್ಷಾ ವ್ಯವಸ್ಥೆಯ ಬಗ್ಗೆ ಇತ್ತೀಚೆಗೆ ಅವಲೋಕನ ನಡೆಸಿರುವ  ಸಂಸದೀಯ ಸಮಿತಿಯೊಂದು ಈ ಕುರಿತು ಗಂಭೀರ ಕಾಳಜಿ ವ್ಯಕ್ತಪಡಿಸಿದೆ. ಭಾರತೀಯ ಆಹಾರ ಸುರಕ್ಷೆ ಗುಣಮಟ್ಟ ಪ್ರಾಧಿಕಾರ (ಫುಡ್ ಸೇಫ್ಟಿ ಸ್ಟ್ಯಾಂಡರ್ಡ್ ಅಥಾರಿಟಿ ಆಫ್ ಇಂಡಿಯಾ)ದ ಕಾರ್ಯನಿರ್ವಹಣೆಯ ಬಗ್ಗೆ ಸಂಸದೀಯ ಸಮಿತಿ ಹಲವಾರು ಪ್ರಶ್ನೆಗಳನ್ನು ಎತ್ತಿದೆ. ಎಫ್‌ಎಸ್‌ಎಸ್‌ಎಐ ತನ್ನ ಕೆಲಸವನ್ನು ಸರಿಯಾಗಿ ಮಾಡುತ್ತಿಲ್ಲ. ಹಾಗೆ ಅದು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿಲ್ಲ ಎನ್ನುವುದನ್ನು ಸರಕಾರವೂ ಗಂಭೀರವಾಗಿ ಪರಿಗಣಿಸಿದಂತಿಲ್ಲ. ದೇಶದಾದ್ಯಂತ ಇರುವ ಲಕ್ಷಾಂತರ ಹೋಟೆಲ್‌ಗಳು, ಖಾನಾವಳಿಗಳು ಮತ್ತು ಇತರ ಆಹಾರ ಸಮುಚ್ಚಯಗಳಲ್ಲಿ ಆಹಾರದ ಸುರಕ್ಷೆಗೆ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗಿದೆಯೇ ಎನ್ನುವುದನ್ನು ಪರಿಶೀಲಿಸಿ ಕಾನೂನು ಕ್ರಮ ತೆಗೆದುಕೊಳ್ಳುವ ಅಧಿಕಾರ ಈ ಪ್ರಾಧಿಕಾರಕ್ಕೆ ಇದೆ. ಆದರೆ ಇದುವರೆಗಿನ ಅದರ ಸಾಧನೆಯನ್ನು ಗಮನಿಸಿದರೆ ನಿರಾಶೆಯಾಗುತ್ತದೆ. ಸಂಸದೀಯ ಸಮಿತಿಯು ಗಮನಿಸಿದಂತೆ, ಈ ಪ್ರಾಧಿಕಾರ ಅತ್ಯಂತ ಕನಿಷ್ಠ ಪ್ರಮಾಣದಲ್ಲಿ ಕಲಬೆರಕೆ ಮತ್ತು ಬ್ರ್ಯಾಂಡ್ ನಕಲು ಪ್ರಕರಣಗಳನ್ನು ಪತ್ತೆ ಹಚ್ಚಿದೆ.

2016–17ರಲ್ಲಿ ಸ್ಯಾಂಪಲ್ ಟೆಸ್ಟ್ ಮೂಲಕ ಆಹಾರ ಕಲಬೆರಕೆ ಮತ್ತು ನಕಲಿ ಪ್ರಕರಣಗಳು ಪತ್ತೆಯಾದದ್ದು ಕೇವಲ 18,325. ಈ ಪ್ರಕರಣಗಳಲ್ಲಿ 13,080 ಪ್ರಕರಣಗಳಲ್ಲಿ ಮಾತ್ರ ಮೊಕದ್ದಮೆ ಹೂಡಲಾಗಿದೆ. ಅದರಲ್ಲೂ ಶಿಕ್ಷೆಯಾದ ಪ್ರಕರಣಗಳು ಕೇವಲ 1605. ಅಂದರೆ ಪ್ರಾಧಿಕಾರ ತನ್ನ ಕೆಲಸದಲ್ಲಿ ಪೂರ್ಣ ವಿಫಲವಾಗಿದೆ ಎನ್ನಬಹುದು. ಇದರ ನೇರ ಪರಿಣಾಮ ಜನರ ಆರೋಗ್ಯದ ಮೇಲೆ ಆಗುತ್ತಿದೆ. ಆಹಾರದ ಕೊರತೆ ಇದ್ದರೆ ಅದನ್ನು ಉತ್ಪಾದನೆ ಹೆಚ್ಚಿಸುವ ಮೂಲಕ ತುಂಬಬಹುದು. ಆದರೆ ಆಹಾರವೇ ಕಲಬೆರಕೆ ಹಾಗೂ ನಕಲಿ ಎಂತಾದರೆ ಯಾರನ್ನು ದೂರುವುದು? ಪರಿಣಾಮಕಾರಿಯಾಗಿ ಕೆಲಸ ಮಾಡದೆ ಇರಲು ತನ್ನದೇ ಆದ ತೊಂದರೆಗಳು ಇರುವುದನ್ನು ಈ ಪ್ರಾಧಿಕಾರವು ಪಟ್ಟಿ ಮಾಡಿದೆ. ಅದರ ಪ್ರಕಾರ, ತೆಗೆದುಕೊಂಡ ಸ್ಯಾಂಪಲ್‌ಗಳಲ್ಲಿ ಶೇಕಡಾ 20ರಷ್ಟರಲ್ಲಿ ಮಾತ್ರ ಕಲಬೆರಕೆ ಗೊತ್ತಾಗಿದೆ. ಸಾಕಷ್ಟು ಸಿಬ್ಬಂದಿ ಇಲ್ಲದಿರುವುದು, ಕಲಬೆರಕೆ ಪತ್ತೆಗೆ ಅತ್ಯಾಧುನಿಕ ಯಂತ್ರೋಪಕರಣಗಳು ಇಲ್ಲದಿರುವುದು, ಎಲ್ಲ ಸ್ಥಳಗಳಲ್ಲಿಯೂ ಪತ್ತೆ ಯಂತ್ರೋಪಕರಣಗಳು ಲಭ್ಯ ಇಲ್ಲದಿರುವುದು, ಸಕಾಲಕ್ಕೆ ವರದಿ ಸಿಗದೆ ಇರುವುದು– ಹೀಗೆ ತೊಂದರೆಗಳ ಪಟ್ಟಿ ಮುಂದುವರಿಯುತ್ತದೆ.

ಸಂಸದೀಯ ಸಮಿತಿಯ ವರದಿಯನ್ನು ಸರಕಾರ ಗಂಭೀರವಾಗಿ ಪರಿಗಣಿಸಿ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕಿದೆ. ಎಲ್ಲ ಜಿಲ್ಲಾ ಕೇಂದ್ರಗಳಲ್ಲೂ ಕಲಬೆರಕೆ ಪತ್ತೆಯ ಯಂತ್ರೋಪಕರಣಗಳು ಲಭ್ಯವಿರುವಂತೆ ನೋಡಿಕೊಳ್ಳಬೇಕಿದೆ. ಸಿಬ್ಬಂದಿಯ ಸಂಖ್ಯೆ ಹೆಚ್ಚಿಸಿ ಹೊಸ ಕಾಲದ ಕಲಬೆರಕೆಗಳನ್ನು ಪತ್ತೆ ಹಚ್ಚುವ ಹೊಸ ವಿಧಾನಗಳ ಬಗ್ಗೆ ಅವರಿಗೆ ತರಬೇತಿ, ತಿಳುವಳಿಕೆ ನೀಡಬೇಕು. ಸಂಚಾರಿ ಪರೀಕ್ಷಾ ಘಟಕಗಳನ್ನು ಸ್ಥಾಪಿಸಿದರೆ ಹೋಬಳಿ ಮಟ್ಟಗಳಲ್ಲೂ ಆಹಾರ ಕಲಬೆರಕೆ ಮತ್ತು ಬ್ರ್ಯಾಂಡ್ ನಕಲಿಯನ್ನು ತಡೆಗಟ್ಟುವುದು ಸುಲಭವಾಗಲಿದೆ.

ಬೀದಿಬದಿ ಆಹಾರ ಇವತ್ತು ಎಲ್ಲ ನಗರ, ಹಳ್ಳಿಗಳಲ್ಲೂ ಅತ್ಯಂತ ಜನಪ್ರಿಯವಾಗುತ್ತಿದೆ. ಸರ್ಕಾರ ಈ ನಿಟ್ಟಿನಲ್ಲೂ ಗಮನ ಹರಿಸಬೇಕಿದೆ. ಬೀದಿ ಬದಿ ವ್ಯಾಪಾರಿಗಳು ನೈರ್ಮಲ್ಯ ರಕ್ಷಣೆ ಮಾಡುವುದಕ್ಕೆ ಪೂರಕವಾದ ಕ್ರಮಗಳನ್ನು ಸ್ಥಳೀಯ ಸಂಸ್ಥೆಗಳು ಕೈಗೊಳ್ಳಬೇಕು. ಕೆಲವು ಕಡೆ ಇಂತಹ ವ್ಯಾಪಾರಿಗಳನ್ನು ಬೀದಿಪಾಲು ಮಾಡುವ ದರ್ಪವನ್ನು ಅಧಿಕಾರಿಗಳು ಮೆರೆದರೆ, ಇನ್ನು ಕೆಲವು ಕಡೆ ಅಧಿಕಾರಿಗಳ ನಿಸ್ಸೀಮ ನಿರ್ಲಕ್ಷ್ಯ ಎದ್ದು ಕಾಣುತ್ತಿದೆ. ಬೆಳೆಯುತ್ತಿರುವ ನಗರೀಕರಣದಲ್ಲಿ ಬೀದಿಬದಿ ಆಹಾರವೂ ಸಂಸ್ಕೃತಿಯ ಒಂದು ಅಂಗವಾಗಿ ಬೆಳೆದಿದೆ. ಯೂರೋಪಿನ ನಗರಗಳಲ್ಲಿ ಇರುವಂತೆ ನಮ್ಮಲ್ಲೂ ಪ್ರತ್ಯೇಕ ಫುಡ್‌ಸ್ಟ್ರೀಟ್‌ಗಳನ್ನು ಅಚ್ಚುಕಟ್ಟಾಗಿ ಸ್ಥಾಪಿಸಿ ಅಲ್ಲಿ ನೈರ್ಮಲ್ಯ ರಕ್ಷಣೆಗೆ ಮೂಲ ಸೌಕರ್ಯಗಳನ್ನು ಒದಗಿಸಿಕೊಡಬೇಕು. ಜನರ ಆರೋಗ್ಯ ರಕ್ಷಣೆಯ ನಿಟ್ಟಿನಲ್ಲಿ ಸರ್ಕಾರ ಹೆಚ್ಚು ಕಾಳಜಿ ವಹಿಸಿದರೆ, ಆರೋಗ್ಯದ ಬಜೆಟ್‌ಗಾಗಿ ಸರ್ಕಾರ ಖರ್ಚು ಮಾಡುವ ಅಪಾರ ದುಡ್ಡು ಉಳಿಯುತ್ತದೆ. ಆರೋಗ್ಯವಂತ ಸಮಾಜದಲ್ಲಿ ಜನರ ಉತ್ಪಾದಕತೆಯೂ ಹೆಚ್ಚಿ ಸರ್ಕಾರಕ್ಕೆ ತೆರಿಗೆ ಆದಾಯವೂ ಹೆಚ್ಚಾಗುತ್ತದೆ.

■ ಬಿ.ಎಂ. ಹನೀಫ್



ಈಶ್ವರ್